# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 632 |
| ಉತ್ತರಿಸಬೇಕಾದ ದಿನಾಂಕ | : 11.12.2025 |
| ಸದಸ್ಯರ ಹೆಸರು | :ಶ್ರೀ ಸಿ.ಎನ್.ಮಂಜೇಗೌಡ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು ) |
| ಉತ್ತರಿಸುವ ಸಚಿವರು | : ಮಾನ್ಯ ಮುಖ್ಯಮಂತ್ರಿಯವರು |

| ಕ್ರಸ | ಕೋರಿರುವ ಮಾಹಿತಿ | ಒದಗಿಸಿರುವ ಮಾಹಿತಿ |
|---|---|---|
| ಅ) | ರಾಜ್ಯದ ಕ್ರೀಡಾ ಇಲಾಖೆಗಳಲ್ಲಿ ಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುವ ಕ್ರೀಡಾ ತರಬೇತುದಾರರುಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ಮಾಹಿತಿ ಒದಗಿಸುವುದು) | ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ವ್ಯಾಪ್ತಿಯಲ್ಲಿರುವ ಕರ್ನಾಟಕ ಕ್ರೀಡಾ ಪ್ರಾಧಿಕಾರದಲ್ಲಿ ಗುತ್ತಿಗೆ ಆಧಾರದ ಮೇಲೆ 43 ಕ್ರೀಡಾ ತರಬೇತುದಾರರು ಕಾರ್ಯನಿರ್ವಹಿಸುತ್ತಿದ್ದಾರೆ. ಅಲ್ಲದೇ, ಹಲವಾರು ವರ್ಷಗಳಿಂದ ಕರ್ನಾಟಕ ಕ್ರೀಡಾ ಪ್ರಾಧಿಕಾರದಲ್ಲಿ 49 ತರಬೇತುದಾರರು ಮಾಸಿಕ ಸಂಚಿತ ವೇತನದ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿದ್ದಾರೆ. ಈ ರೀತಿ ಒಟ್ಟಾರೆ 92 ತರಬೇತುದಾರರು ಕಾರ್ಯ ನಿರ್ವಹಿಸುತ್ತಿದ್ದಾರೆ. ಜಿಲ್ಲಾವಾರು ವಿವರ **ಅನುಬಂಧ 1 ಮತ್ತು 2**ರಲ್ಲಿ ಒದಗಿಸಿದೆ. |
| ಆ) | ಈ ಗುತ್ತಿಗೆ ನೌಕರರನ್ನು ವರ್ಷದಲ್ಲಿ ಒಂದು ಬಾರಿ ಒಂದು ತಿಂಗಳ ಕಾಲ ಸೇವೆಯಿಂದ ಬಿಡುಗಡೆಗೊಳಿಸುವ ಪದ್ಧತಿ ಜಾರಿಯಲ್ಲಿದೆಯೇ; ಇದಕ್ಕೆ ನಿಯಮಗಳಲ್ಲಿ ಅವಕಾಶವಿದೆಯೇ? | ಇಲ್ಲ.<br><br>ಗುತ್ತಿಗೆ ಆಧಾರದಲ್ಲಿ ಒಂದು ವರ್ಷದ ಅವಧಿಗೆ ಕರ್ನಾಟಕ ಕ್ರೀಡಾ ಪ್ರಾಧಿಕಾರದಲ್ಲಿ ನೇಮಕಗೊಂಡ ತರಬೇತುದಾರರನ್ನು ಗುತ್ತಿಗೆ ಅವಧಿ ಮುಕ್ತಾಯಗೊಂಡ ಕೂಡಲೇ ನಿಯಮಾನುಸಾರ ಕರ್ತವ್ಯದಿಂದ ಬಿಡುಗಡೆಗೊಳಿಸಲಾಗುತ್ತಿದೆ. ಈ ರೀತಿ ಗುತ್ತಿಗೆ ಆಧಾರದಲ್ಲಿ ನೇಮಕಗೊಂಡ ತರಬೇತುದಾರರನ್ನು ಮರುನೇಮಕ ಮಾಡಿಕೊಳ್ಳುವಾಗ ತರಬೇತುದಾರರ 'ಕಾರ್ಯಕ್ಷಮತೆ ಪರಿಶೀಲಿಸಿ, ಪದಕ ಇತ್ಯಾದಿಗಳಿಗೆ ಕೊಡುಗೆ ನೀಡಿದವರನ್ನು ಮಾತ್ರ' ಮರು ನೇಮಕ ಮಾಡುವ ನಿರ್ದೇಶನವಿರುವುದರಿಂದ ಉತ್ತಮ ಕಾರ್ಯಕ್ಷಮತೆ ಹೊಂದಿದ ತರಬೇತುದಾರರನ್ನು ಮಾತ್ರ ಮುಂದಿನ ಅವಧಿಗೆ ಗುತ್ತಿಗೆ ಆಧಾರದಲ್ಲಿ ನೇಮಿಸಿಕೊಳ್ಳಲಾಗುತ್ತಿದೆ. |
| ಇ) | ಒಂದು ತಿಂಗಳ ಕಾಲ ಇವರನ್ನು ಸೇವೆಯಿಂದ ಬಿಡುಗಡೆಗೊಳಿಸುವುದರಿಂದಾಗಿ ರಾಜ್ಯದ ಸುಮಾರು 32 ಕ್ರೀಡಾ ನಿಲಯಗಳು ಒಂದು ತಿಂಗಳ ಕಾಲ ಚಟುವಟಿಕೆ ರಹಿತವಾಗಿ ಕ್ರೀಡಾ ವಿದ್ಯಾರ್ಥಿಗಳಿಗೆ ತರಬೇತಿ ಅನಾನುಕೂಲವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ.<br>ಗುತ್ತಿಗೆ ಆಧಾರದ ಮೇಲೆ ನಿಗಧಿತ ಅವಧಿಗೆ ನೇಮಕಗೊಂಡ ನೌಕರರನ್ನು ಗುತ್ತಿಗೆ ಅವಧಿ ಮುಗಿದ ನಂತರ ನಿಯಮಾನುಸಾರ ಕರ್ತವ್ಯದಿಂದ ಬಿಡುಗಡೆ ಮಾಡಲಾಗುತ್ತಿದ್ದು, ಸರ್ಕಾರದ ಆದೇಶಾನುಸಾರ ಕಾರ್ಯಕ್ಷಮತೆ ಆಧರಿಸಿ, ಮುಂದಿನ ಗುತ್ತಿಗೆ ಅವಧಿಗೆ ಮರು ನೇಮಕ ಮಾಡಲಾಗುತ್ತಿದೆ. ಅಲ್ಲದೇ, ಕರ್ನಾಟಕ ಕ್ರೀಡಾ ಪ್ರಾಧಿಕಾರದಲ್ಲಿ 49 ಜನ ಮಾಸಿಕ ಸಂಚಿತ ವೇತನದಲ್ಲಿ ಕಾರ್ಯನಿರ್ವಹಿಸುತ್ತಿರುವ ತರಬೇತುದಾರರ ಮೂಲಕ ಕ್ರೀಡಾ ವಸತಿ ಶಾಲೆ/ನಿಲಯಗಳ ಕ್ರೀಡಾಪಟುಗಳಿಗೆ ತರಬೇತಿ ಒದಗಿಸುವ ಮೂಲಕ ಕ್ರೀಡಾಪಟುಗಳಿಗೆ ಹೆಚ್ಚಿನ ಅನಾನುಕೂಲವಾಗದಂತೆ ಕ್ರಮ ವಹಿಸಲಾಗುತ್ತಿದೆ. |

<table>
<tr>
<td>ಈ)</td>
<td>ಬಂದಿದ್ದಲ್ಲಿ, ಇಂತಹ ದೋಷಪೂರಿತ ನಿಯಮಗಳನ್ನು ಕೈಬಿಟ್ಟು ಕ್ರೀಡಾ ಬೆಳವಣಿಗೆಗೆ ಸಹಕಾರಿಯಾಗುವ ರೀತಿಯಲ್ಲಿ ಸರ್ಕಾರ ಸಕಾರಾತ್ಮಕವಾಗಿ ಸ್ಪಂದಿಸುವುದೇ?</td>
<td>ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಲ್ಲಿ ಕೆಳಕಂಡ 176 ತಾಲ್ಲೂಕು ತರಬೇತುದಾರರು ಕಂ ಸಂಯೋಜಕರ ಖಾಯಂ ಹುದ್ದೆಗಳನ್ನು ಸೃಜಿಸಲಾಗಿದ್ದು, ಸದರಿ ಹುದ್ದೆಗಳನ್ನು ನಿಯಮಾನುಸಾರ ಭರ್ತಿ ಮಾಡಿದ ನಂತರ ನಿಗದಿತ ಅವಧಿಗೆ ಗುತ್ತಿಗೆ ಆಧಾರದಲ್ಲಿ ನೇಮಕಾತಿ ಮಾಡುವ ಪ್ರಕ್ರಿಯೆಯಿಂದ ಕ್ರೀಡಾ ವಸತಿ ಶಾಲೆ/ನಿಲಯಗಳ ಕ್ರೀಡಾಪಟುಗಳಿಗೆ ಆಗುತ್ತಿರುವ ಅನಾನುಕೂಲಗಳು ಕೊನೆಯಾಗಲಿವೆ:
<table>
<tr><th>ಕ್ರ ಸಂ</th><th>ಹುದ್ದೆಯ ವಿವರ</th><th>ಸಂಖ್ಯೆ</th></tr>
<tr><td>1</td><td>ತಾಲ್ಲೂಕು ಹಿರಿಯ ತರಬೇತುದಾರರು ಮತ್ತು ಸಂಯೋಜಕರು</td><td>04</td></tr>
<tr><td>2</td><td>ತಾಲ್ಲೂಕು ಕಿರಿಯ ತರಬೇತುದಾರರು ಕಂ ಸಂಯೋಜಕರು</td><td>15</td></tr>
<tr><td>3</td><td>ತರಬೇತುದಾರರು</td><td>12</td></tr>
<tr><td>4</td><td>ತಾಲ್ಲೂಕು ಕಿರಿಯ ತರಬೇತುದಾರರು ಕಂ ಸಂಯೋಜಕರು ಗ್ರೇಡ್-2/ ಸ್ಪೋರ್ಟ್ಸ್ ಫಿಸಿಯೋಥೆರಪಿಸ್ಟ್/ ಸ್ಪೋರ್ಟ್ಸ್ ಸ್ಟ್ರೆಂಥ್ ಅಂಡ್ ಕಂಡಿಷನಿಂಗ್ ಕೋಚ್</td><td>157</td></tr>
</table>
</td>
</tr>
</table>

**ವೈಎಸ್‌ಡಿ-ಸಿಡಿಎನ್/517/2025**

**(ಸಿದ್ದರಾಮಯ್ಯ)**

ಮುಖ್ಯಮಂತ್ರಿ

## ಅನುಬಂಧ-1

## ಕರ್ನಾಟಕ ಕ್ರೀಡಾ ಪ್ರಾಧಿಕಾರದಲ್ಲಿ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಲಾದ ತರಬೇತುದಾರರು ಕಾರ್ಯನಿರ್ವಹಿಸುತ್ತಿರುವ ಸ್ಥಳಗಳ ಜಿಲ್ಲಾವಾರು ವಿವರ

| ಕ್ರಮ ಸಂಖ್ಯೆ | ಜಿಲ್ಲೆಯ ಹೆಸರು | ತರಬೇತುದಾರರ ಹೆಸರು ಶ್ರೀ /ಶ್ರೀಮತಿ | ಕ್ರೀಡೆ |
|---|---|---|---|
| 1 | ಬಾಗಲಕೋಟೆ ಜಿಲ್ಲೆ | ಕಾಡೇಶ್ ನ್ಯಾಮಗೌಡ | ಕುಸ್ತಿ |
| 2 | ಬಳ್ಳಾರಿ ಜಿಲ್ಲೆ | ಮಹಮದ್ ಮಸೂದ್ | ಫುಟ್ಬಾಲ್ |
| 3 | ಬೆಂಗಳೂರು ನಗರ ಜಿಲ್ಲೆ | ಅನಿಲ್ ಕುಮಾರ್ ಬಿ | ಆರ್ಚರಿ |
| | | ಅನೂಪ್ ಎ. ವೈ. | ಬಾಸ್ಕೆಟ್‌ಬಾಲ್ |
| | | ರಘುನಾಥ್ ಬಿ.ಎಸ್ | ವೈಯಿಟ್‌ಲಿಫ್ಟಿಂಗ್ |
| 4 | ಬೆಳಗಾವಿ ಜಿಲ್ಲೆ | ರೋಹಿಣಿ ಬಾಬುರಾವ್ ಪಾಟೀಲ್ | ಜೂಡೋ |
| | | ಕುತುಜಾ ಷರೀಫ್ ಮುಲ್ತಾನಿ | ಜೂಡೋ |
| | | ಹನುಮಂತ ಪಿ. ಪಾಟೀಲ್ | ಕುಸ್ತಿ |
| | | ಸ್ಮಿತಾ ಬಿ. ಪಾಟೀಲ್ | ಕುಸ್ತಿ |
| 5 | ಚಾಮರಾಜನಗರ ಜಿಲ್ಲೆ | ವಿವೇಕ್ ಬಿ. ಎನ್. | ಫೆನ್ಸಿಂಗ್ |
| 6 | ಚಿಕ್ಕಮಗಳೂರು ಜಿಲ್ಲೆ | ನೂರು ಆಲೀಂ ಎ. ಎಸ್. | ಅಥ್ಲೆಟಿಕ್ಸ್ |
| | | ರವಿ | ಜೂಡೋ |
| 7 | ಚಿತ್ರದುರ್ಗ ಜಿಲ್ಲೆ | ತಿಪ್ಪಣ್ಣ ಎಸ್. ಮಾಳಿ | ಅಥ್ಲೆಟಿಕ್ಸ್ |
| 8 | ದಾವಣಗೆರೆ ಜಿಲ್ಲೆ | ವಿನೋದ್ ಕುಮಾರ್ ಕೆ. | ಕುಸ್ತಿ |
| 9 | ಧಾರವಾಡ ಜಿಲ್ಲೆ | ಚಂದ್ರಶೇಖರ್ ನಾಯಕ್ | ಹಾಕಿ |
| | | ಅನುಶ್ರೀ ಹೆಚ್. ಎಸ್. | ಕುಸ್ತಿ |
| | | ಶಿವಪ್ಪ ಸಿದ್ದರಾಮ್ ಪಾಟೀಲ್ | ಕುಸ್ತಿ |
| 10 | ಗದಗ ಜಿಲ್ಲೆ | ವಿದ್ಯಾ ಜಿ. ಕುಲಕರ್ಣಿ | ಸೈಕ್ಲಿಂಗ್ |
| | | ಮಂಜುನಾಥ್ ಜೆ. ಬಾಗಡೆ | ಹಾಕಿ |
| 11 | ಹಾಸನ ಜಿಲ್ಲೆ | ರಾಘವೇಂದ್ರ ಬೆನ್ನೂರ್ | ಬಾಸ್ಕೆಟ್‌ಬಾಲ್ |
| 12 | ಹಾವೇರಿ ಜಿಲ್ಲೆ | ಪ್ರದೀಪ್ ಎಂ. ಎನ್. | ಅಥ್ಲೆಟಿಕ್ಸ್ |
| 13 | ಕಲಬುರಗಿ ಜಿಲ್ಲೆ | ರಾಜುಬಾಬು ರಾವ್ ಚೌಹಾಣ್ | ಅಥ್ಲೆಟಿಕ್ಸ್ |
| 14 | ಕೋಲಾರ ಜಿಲ್ಲೆ | ವೆಂಕಟೇಶ್ ಎಂ. | ಅಥ್ಲೆಟಿಕ್ಸ್ |
| 15 | ಕೊಡಗು ಜಿಲ್ಲೆ | ಮಹಾಬಲ ಕೆ. | ಅಥ್ಲೆಟಿಕ್ಸ್ |
| | | ಕೆ. ಎಂ. ಸುಬ್ಬಯ್ಯ | ಹಾಕಿ |
| 16 | ಮಂಡ್ಯ ಜಿಲ್ಲೆ | ಭರತ್ ರಾಜ್ ಸಿ. ಬಿ. | ಬಾಸ್ಕೆಟ್ ಬಾಲ್ |
| | | ರೂಪಾಶ್ರೀ ಕೆ. ಜೆ. | ಕಬಡ್ಡಿ |
| | | ಚೈತ್ರ ಆರ್. ಅಂಬಡಗಟ್ಟಿ | ಅಥ್ಲೆಟಿಕ್ಸ್ |
| 17 | ಮೈಸೂರು ಜಿಲ್ಲೆ | ರಾಮಸ್ವಾಮಿ ಕೆ. ಎನ್. | ಅಥ್ಲೆಟಿಕ್ಸ್ |
| | | ರವೀಂದ್ರ ಟಿ. ಬಿ. | ವಾಲಿಬಾಲ್ |
| 18 | ದಕ್ಷಿಣ ಕನ್ನಡ ಜಿಲ್ಲೆ | ನವೀನ್ ಗೌಡ ಸಿ. | ಅಥ್ಲೆಟಿಕ್ಸ್ |

| | | | |
|---|---|---|---|
| 19 | ಶಿವಮೊಗ್ಗ ಜಿಲ್ಲೆ | ಬಾಳಪ್ಪ ಟಿ. ಮಾನೆ | ಅಥ್ಲೆಟಿಕ್ಸ್ |
| | | ಚಿತ್ರಶ್ರಿ ಎ. | ಹಾಕಿ |
| | | ರಾಜಪ್ಪ ಎಸ್. ಫಳಕೆ | ಕುಸ್ತಿ |
| 20 | ಕಾರವಾರ ಜಿಲ್ಲೆ | ಶಿವಾನಂದ ಬಿ. ನಾಯ್ಕ್ | ಅಥ್ಲೆಟಿಕ್ಸ್ |
| 21 | ಉತ್ತರ ಕನ್ನಡ ಜಿಲ್ಲೆ | ತುಕರಾಮ್ ಗೌಡ | ಕುಸ್ತಿ |
| 22 | ಉಡುಪಿ ಜಿಲ್ಲೆ | ದೇವಣ್ಣ ನಾಯ್ಕ್ | ಅಥ್ಲೆಟಿಕ್ಸ್ |
| 23 | ವಿದ್ಯಾನಗರ | ಬಾಲಕೃಷ್ಣ ಅವಲಕ್ಕಿ | ಅಥ್ಲೆಟಿಕ್ಸ್ |
| | | ವಿಶ್ವನಾಥ ಪ್ರಹ್ಲಾದ್ ಗುಜ್ಜಣ್ಣನವರ್ | ಅಥ್ಲೆಟಿಕ್ಸ್ |
| | | ನಾಗೇಶ್ ಮಾರುತಿ ಪಾಟೀಲ್ | ಬಾಕ್ಸಿಂಗ್ |
| | | ಶಾಂತಿ ಎಸ್ | ಫುಟ್ಬಾಲ್ |
| 24 | ವಿಜಯಪುರ ಜಿಲ್ಲೆ | ಅನಂತ್ ಶ್ರೀನಿವಾಸ್ ದೇಸಾಯಿ | ಸೈಕ್ಲಿಂಗ್ |
| 25 | ಯಾದಗಿರಿ ಜಿಲ್ಲೆ | ಮಂಜುನಾಥ್ ಕೆ. ಎನ್ . | ಅಥ್ಲೆಟಿಕ್ಸ್ |

## ಅನುಬಂಧ- 02

## ಕರ್ನಾಟಕ ಕ್ರೀಡಾ ಪ್ರಾಧಿಕಾರದಲ್ಲಿ ಮಾಸಿಕ ಸಂಚಿತ ವೇತನ ಆಧಾರದಲ್ಲಿ ಕಾರ್ಯನಿರ್ವಹಿಸುತ್ತಿರುವ ತರಬೇತುದಾರರ ಜಿಲ್ಲಾವಾರು ವಿವರ

| ಕ್ರಮ ಸಂಖ್ಯೆ | ಜಿಲ್ಲೆಯ ಹೆಸರು | ತರಬೇತುದಾರರ ಶ್ರೀ/ಶ್ರೀಮತಿ | ಕ್ರೀಡೆ |
|---|---|---|---|
| 1 | ಬಾಗಲಕೋಟೆ ಜಿಲ್ಲೆ | ಅನಿತಾ ನಿಂಬರಗಿ | ಸೈಕ್ಲಿಂಗ್ |
| 2 | ಬೆಂಗಳೂರು ಗ್ರಾಮಾಂತರ ಜಿಲ್ಲೆ | ಪ್ರಭು ಎಂ | ಅಥ್ಲೆಟಿಕ್ಸ್ |
| 3 | ಬೆಂಗಳೂರು ನಗರ ಜಿಲ್ಲೆ | ಶಂಕರಪ್ಪ ಪಿ. ಎಲ್ | ಅಥ್ಲೆಟಿಕ್ಸ್ |
| | | ಬಿ. ಎನ್. ಸುಧಾಕರ್ | ಬ್ಯಾಡ್ಮಿಂಟನ್ |
| | | ಎನ್. ಬಾಲಕೃಷ್ಣ | ಬಾಸ್ಕೆಟ್‌ಬಾಲ್ |
| | | ಐರಾಂ ದೇಬಾನ್ ಸಿಂಗ್ | ಫೆನ್ಸಿಂಗ್ |
| | | ಎಂ.ಜಿ. ಘಟ್ನಟ್ಟಿ | ಜಿಮ್ನಾಸ್ಟಿಕ್ಸ್ |
| | | ಟಿ. ವಿಜಯ ಕೃಷ್ಣ | ಹಾಕಿ |
| | | ಎನ್. ಪ್ರಕಾಶ್ | ಜೂಡೋ |
| | | ಚಿನ್ನಪ್ಪ | ಲಾನ್ ಟೆನ್ನಿಸ್ |
| | | ಅಶೋಕ ಕೆ.ಸಿ. | ವಾಲಿಬಾಲ್ |
| | | ಅಶೋಕ ಬಿ. ಮಂಟೂರ್ | ಅಥ್ಲೆಟಿಕ್ಸ್ |
| 4 | ಬೆಳಗಾವಿ ಜಿಲ್ಲೆ | ಸಂಜೀವ್ ಕುಮಾರ್ ಎ. ನಾಯ್ಕ್ | ಅಥ್ಲೆಟಿಕ್ಸ್ |
| | | ವಿ. ಎಸ್. ಪಾಟೀಲ್ | ಬಾಸ್ಕೆಟ್‌ಬಾಲ್ |
| | | ಬಸವರಾಜ ಸಿ. ಹೊಸಮಠ್ | ವಾಲಿಬಾಲ್ |
| | | ಎನ್. ಎ. ಮೀರಜ್‌ಕರ್ | ವಾಲಿಬಾಲ್ |
| | | ಸದಾನಂದ ಮಾಳ್ ಶೆಟ್ಟಿ | ವೈಯಿಟ್‌ಲಿಫ್ಟಿಂಗ್ |
| | | ಎ. ಆರ್. ನಾಗರಾಜ್ | ಕುಸ್ತಿ |
| 5 | ಬಳ್ಳಾರಿ ಜಿಲ್ಲೆ | ಜಾಕೀರ್ | ಹಾಕಿ |
| 6 | ಚಾಮರಾಜನಗರ ಜಿಲ್ಲೆ | ಬಿ. ಕೆ. ಗೋಪಾಲ್ | ಫುಟ್ಬಾಲ್ |
| 7 | ಚಿಕ್ಕಮಗಳೂರು ಜಿಲ್ಲೆ | ತ್ರಿವೇಣಿ ಎಂ. ಎನ್. | ಜೂಡೋ |
| | | ಸಿ. ಎಸ್. ವಿನುತ | ವಾಲಿಬಾಲ್ |
| 8 | ಚಿತ್ರದುರ್ಗ ಜಿಲ್ಲೆ | ಮೊಹ್ಮದ್ ಮಹಿಬುಲ್ಲ | ವಾಲಿಬಾಲ್ |
| 9 | ದಾವಣಗೆರೆ ಜಿಲ್ಲೆ | ಮೊಹ್ಮದ್ ಇಸ್ಮಾಯಿಲ್ | ಕಬಡ್ಡಿ |
| | | ಜೆ. ರಾಮಲಿಂಗಪ್ಪ | ಖೋ-ಖೋ |
| | | ಸುನಿತಾ ಎಂ. ಸಿ | ಖೋ-ಖೋ |
| | | ಮಿರ್ಜಾ ಶಾ. ಜಮಾ ಅಹ್ಮಮದ್ | ವಾಲಿಬಾಲ್ |

| | | | |
|---|---|---|---|
| 10 | ದಾರವಾಡ ಜಿಲ್ಲೆ | ಶ್ಯಾಮಲಾ ಪಾಟೀಲ್ | ಅಥ್ಲೆಟಿಕ್ಸ್ |
| 11 | ಹಾಸನ ಜಿಲ್ಲೆ | ಹೆಚ್. ಬಿ. ರವೀಶ್ | ಹಾಕಿ |
| | | ಎಸ್. ಎನ್. ರಮೇಶ್ | ವಾಲಿಬಾಲ್ |
| 12 | ಕಲಬುರಗಿ ಜಿಲ್ಲೆ | ಸಂಜಯ ಬಾಣದ್ | ಹಾಕಿ |
| 13 | ಕೊಡಗು ಜಿಲ್ಲೆ | ಮಂಜುನಾಥ್ ಬಿ. ಜಿ. | ಅಥ್ಲೆಟಿಕ್ಸ್ |
| | | ಎ. ಸಿ. ದಿನಮಣಿ | ಹಾಕಿ |
| | | ಕೆ. ಕೆ. ಬಿಂದಿಯ | ಹಾಕಿ |
| 14 | ಕೊಪ್ಪಳ ಜಿಲ್ಲೆ | ರೋಹಿಣಿ ಪರ್ವತೀಕರ್ | ಅಥ್ಲೆಟಿಕ್ಸ್ |
| | | ಯತಿರಾಜ್ ಎ.ಎನ್ | ಖೋ-ಖೋ |
| 15 | ಮಂಡ್ಯ ಜಿಲ್ಲೆ | ಬಿ. ಸೋಮಶೇಖರ್ | ವಾಲಿಬಾಲ್ |
| 16 | ದಕ್ಷಿಣ ಕನ್ನಡ ಜಿಲ್ಲೆ | ಸರಸ್ವತಿ ಪುತ್ರನ್ | ವೈಯಿಟ್‌ಲಿಫ್ಟಿಂಗ್ |
| 17 | ಮೈಸೂರು ಜಿಲ್ಲೆ | ಗಿರೀಶ್ ಬಿ,ಎಸ್ | ಬಾಸ್ಕೆಟ್‌ಬಾಲ್ |
| | | ಆರ್, ಸುಂದರೇಶ್ | ಹಾಕಿ |
| 18 | ತುಮಕೂರು ಜಿಲ್ಲೆ | ಶಿವಪ್ರಸಾದ್ ಎಂ, ಆರ್ | ಅಥ್ಲೆಟಿಕ್ಸ್ |
| | | ಸುಧೀರ್ ದೇವದಾಸ್ | ಜಿಮ್ನಾಸ್ಟಿಕ್ಸ್ |
| 19 | ಉಡುಪಿ ಜಿಲ್ಲೆ | ರಾಜೇಶ್ ಪತ್ತಾರ್ | ವಾಲಿಬಾಲ್ |
| 20 | ಉತ್ತರ ಕನ್ನಡ | ಶಿವಾನಂದ ಆರ್ | ಕುಸ್ತಿ |
| 21 | ವಿದ್ಯಾನಗರ, ಬೆಂಗಳೂರು ನಗರ ಜಿಲ್ಲೆ | ಸತ್ಯನಾರಾಯಣ ಕೆ | ಬಾಸ್ಕೆಟ್‌ಬಾಲ್ |
| | | ಎನ್. ಆರ್. ಗೀತಾ | ವಾಲಿಬಾಲ್ |
| 22 | ವಿಜಯಪುರ ಜಿಲ್ಲೆ | ಹಸನ್‌ಕರ್ ಪಿ.ಕೆ | ಬಾಸ್ಕೆಟ್‌ಬಾಲ್ |
| | | ಅಲ್ಕಾ ಎನ್. ಘಡತಾರೆ | ಸೈಕ್ಲಿಂಗ್ |
| | | ಬಿ.ವಿ. ರಾಘವೇಂದ್ರ ಪೈ | ವಾಲಿಬಾಲ್ |